

## ಹರತಾಳಿಕಾ ಪೂಜೆ

ಹರತಾಳಿಕಾ ಪೂಜೆಯನ್ನು ಸಾಮಾನ್ಯವಾಗಿ ಮಹಾರಾಷ್ಟ್ರದಲ್ಲಿ ಮಾಡುತ್ತಾರೆ. ಅದರ ಪ್ರಭಾವ ಕರ್ನಾಟಕದ ಗಡಿ ಜಿಲ್ಲೆಗಳಲ್ಲಿಯೂ ವ್ಯಾಪಕವಾಗಿದೆ. ಪಾರ್ವತಿಯ ತಂದೆ ಆಕೆಗೆ ವಿಷ್ಣುವಿನ ಜೊತೆ ವಿವಾಹ ಮಾಡಬೇಕೆಂದು ಸಂಕಲ್ಪ ಮಾಡುತ್ತಾನೆ.  ಆದರೆ ಪಾರ್ವತಿ ಪರಮೇಶ್ವರನನ್ನು ವಿವಾಹವಾಗಲು ಬಯಸುತ್ತಾಳೆ. ತನ್ನ ಆಸೆ ಕೈಗೂಡಲು ಗಂಗಾನದಿಯ ತಟದಲ್ಲಿ ಮರಳಿನ ಲಿಂಗ ಮಾಡಿ ಪೂಜೆಗೈದು ಹಣ್ಣುಹಂಪಲು ನೈವೇದ್ಯ ಅರ್ಪಿಸುತ್ತಾಳೆ. ಅಂದು ತಾನೂ ಉಪವಾಸವಿದ್ದು ವೀಳ್ಯದೆಲೆ ಮೇಲೆ ಜೇನುತುಪ್ಪ ಹಾಕಿ ಶಿವನಿಗರ್ಪಿಸಿ ಪ್ರಸಾದ ರೂಪದಲ್ಲಿ ತಾನೂ ಸೇವಿಸಿ ನಂತರ ಗಂಗಾನದಿಯಲ್ಲಿ ಆ ಲಿಂಗ ವಿಸರ್ಜನೆ ಮಾಡುತ್ತಾಳೆ. ಅದರ ಫಲವಾಗಿ ಶಿವನ ಜೊತೆ ಆಕೆಯ ವಿವಾಹವಾಗುತ್ತದೆ.

ಅಂತಲೇ ಇಂದಿಗೂ ಅವಿವಾಹಿತ ಯುವತಿಯರು ಹೀಗೆ ಪೂಜೆ ಮಾಡಿ ತಮ್ಮ ಇಷ್ಟಾರ್ಥ ಪೂರೈಸಿಕೊಳ್ಳುತ್ತಾರೆ. ಇದಕ್ಕೆ 'ಹರತಾಳಿಕಾ' ಪೂಜೆ ಎನ್ನುತ್ತಾರೆ. ಇದರಿಂದ ಸುಂದರವಾದ, ಸದ್ಗುಣವಂತನಾದ ಪತಿ ಲಭಿಸುವನೆಂಬ ಪ್ರತೀತಿ ಇದೆ. ಕಲ್ಬುರ್ಗಿ ಜಿಲ್ಲೆ ಜೇವರ್ಗಿ ತಾಲ್ಲೂಕಿನಲ್ಲಿ ಹರಿಯುವ ಭೀಮಾರತಿ ಹೊಳೆಯ ತೀರದಲ್ಲಿ ಈ ರೀತಿ ಪೂಜೆಮಾಡಿ ವಿಸರ್ಜಿಸುತ್ತಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

**-ಮನೀಷಾ ಪಾಟೀಲ, ವಿಜಯಪುರ**

## ಅಭಿಜಾತ ಕಲಾವಿದ

ಹಾಸನದ ಹೇಮಾವತಿನಗರ ಬಡಾವಣೆಯ ಮುಖ್ಯರಸ್ತೆಯಲ್ಲಿ ಫ್ಯಾನ್ಸಿ ಸ್ಟೋರ್ ಇಟ್ಟಿರುವ ಹೆಚ್.ವಿ. ಸತೀಶ್ ಒಬ್ಬ ಹುಟ್ಟು ಕಲಾವಿದ. ಚಿಕ್ಕಂದಿನಿಂದ ಕಲೆಯ ಬಗ್ಗೆ ಆಸಕ್ತಿ ಹೊಂದಿದ್ದರೂ ಸೂಕ್ತ ಪ್ರೋತ್ಸಾಹ ಸಿಗದೆ ಎಲೆ ಮರೆಯ ಕಾಯಿಯಂತೆ ಉಳಿದವರು. ಸ್ವಂತ ಊರು ಕೊಡಗಿನ ಹೆಬ್ಬಾಲೆ. ಜೀವನೋಪಾಯ ಅರಸುತ್ತಾ ಹಾಸನಕ್ಕೆ ಬಂದು ಫ್ಯಾನ್ಸಿ ಸ್ಟೋರ್ ತೆರೆದು ವ್ಯಾಪಾರ ಮಾಡುತ್ತಿದ್ದಾರೆ.

ಸತೀಶ್ ಅವರು ಬೆಂಡು, ಸೋಪು ಹಾಗೂ ಕಾಗದದಿಂದ ಕಲಾಕೃತಿಗಳನ್ನು ಮಾಡುವ ನೈಪುಣ್ಯ ಪಡೆದದ್ದು ಸ್ವಂತ ಆಸಕ್ತಿ ಹಾಗೂ ಪರಿಶ್ರಮದಿಂದ. ತಾವೇ ವಿವಿಧ ವಿನ್ಯಾಸಗಳನ್ನು ಕಲ್ಪಿಸಿಕೊಳ್ಳುತ್ತಾ, ಪ್ರಯೋಗಶೀಲರಾಗಿ ಕಲಾಕೃತಿಗಳನ್ನು ಮಾಡುತ್ತಾ ಬಂದವರು. ಇದು ಕೇವಲ ಹವ್ಯಾಸವಾಗಿ ಉಳಿದಿದೆ. ಶಿಕ್ಷಣ ಕಾಲೇಜಿನ ವಿದ್ಯಾರ್ಥಿಗಳು ಸತೀಶ್ ಅವರಿಂದ ಪಾಠೋಪಕರಣಗಳನ್ನು ಮಾಡಿಸಿಕೊಳ್ಳುವುದುಂಟು. ಕೆಲವರು ಮಕ್ಕಳಿಗೆ ಹೇಳಿಕೊಡಿ ಅನ್ನುತ್ತಾರೆ. ಆದರೆ

ವ್ಯಾಪಾರದ ನಡುವೆ ಬಿಡುವು ಮಾಡಿಕೊಳ್ಳುವುದೂ ಕಷ್ಟಸಾಧ್ಯವಾಗಿದೆ.

**ಚಿತ್ರ-ಬರಹ: ಕೆ.ಎಸ್. ನೀತಾ, ಬೆಂಗಳೂರು**





## ಕುಂಬಾರ ಹುಳುವಿನ 'ಮಡಕೆ'

ಮಲೆನಾಡಿನ ಮನೆಯ ಮಾಡಿಗೆ ಜೋತುಬೀಳುವ ಈ ಗೂಡುಗಳು ಕುಂಬಾರರು ಮಾಡುವ 'ಮಡಕೆ'ಗಳ ಹಾಗೆ ಇವೆ. ಪ್ರಕೃತಿಯ ವಿನ್ಯಾಸವೂ ಕುಂಬಾರರ ಕುಶಲ ಕಲೆಯೂ ಸಮನ್ವಯವಾಗಿರುವ ಈ ಚಿಕ್ಕ ಹುಳುವಿನ ಶ್ರಮ ಸೋಜಿಗವೆನಿಸುತ್ತದೆ. ಮಣ್ಣಿನ ಮಡಕೆಯಂತೆ ಸಾಲು ಸಾಲಾಗಿ ಸೇರಿಸಿ ಕುಂಬಾರ ಹುಳು ಸಂತಾನೋತ್ಪತ್ತಿ ನಡೆಸುವ ಈ ಗೂಡು ಕಂಡುಬಂದದ್ದು ಯಲ್ಲಾಪುರದ ಶಾಲೆಯ ಆವರಣದಲ್ಲಿ.

**ಚಿತ್ರ-ಬರಹ:**
**ದತ್ತಾತ್ರೇಯ ಭಟ್ಟ, ಕಣ್ಣಿಪಾಲ ಯಲ್ಲಾಪುರ**